**ದಿಃ 29-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಶ್ರೀ ಎಸ್ ಬಿ ಪಿ 7 ಮತ್ತು 8 ನೇ ಪ್ರತಿವಾದಿ ಪರ ವಕೀಲರಿಂದ**

ಅಸಲು ದಾವೆ ನಂ 42/2002 ರ ಪ್ರಕರಣದಲ್ಲಿ ನಾನು ಭಾಗಿಯಾಗಿಲ್ಲ. ಅಸಲು ದಾವೆ ನಂ 42/2002 ರ ಪ್ರಕರಣದಲ್ಲಿ ನಾವು ರಾಜಿ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ನಾನು ಪಿಯುಸಿ ವ್ಯಾಸಂಗ ಮಾಡಿದ್ದೇನೆ. ಸಾಕ್ಷಿಗೆ ದಿನಾಂಕ 31.07.1981 ರ ನೋಂದಾಯಿತ ಹಕ್ಕು ಖುಲಾಸೆ ಪತ್ರವನ್ನು ಅದನ್ನು ತಾನೇ ಬರದುಕೊಟ್ಟಿರುವುದಾಗಿ ಕೇಳಿ ಸಾಕ್ಷಿ ಸದರಿ ದಾಖಲೆಯನ್ನು ನೋಡಿ ತಾನು ಸದರಿ ಹಕ್ಕು ಖುಲಾಸೆ ಪತ್ರವನ್ನು ಬರೆದುಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ 14.12.2002 ರಂದು ಕ್ರಯದ ಕರಾರುಪತ್ರವನ್ನು ತೋರಿಸಿ ಕೇಳಲಾಗಿ ಸಾಕ್ಷಿ ಸದರಿ ಕರಾರು ಪತ್ರದಲ್ಲಿಯ ತನ್ನ ಸಹಿ ನೋಡಿ ಗುರುತಿಸಿದ್ದು, ವಿನಂತಿಯ ಮೇರೆಗೆ ಸದರಿ ದಾಖಲೆಯನ್ನು ನಿಡಿ 1 ಎಂದು ಗುರುತಿಸಲಾಯಿತು. 7 ನೇ ಪ್ರತಿವಾದಿಯ ತಂದೆಗೆ ನಿಡಿ 1 ರ ದಾಖಲೆ ಬರೆದುಕೊಟ್ಟಿದ್ದೇವೆ ಎಂದರೆ ಸರಿ. ನಿಡಿ 1 ರ ದಾಖಲೆ ಬರೆದುಕೊಟ್ಟ ದಿನವೇ 8 ನೇ ಪ್ರತಿವಾದಿಯಿಂದ ಹಣ ಪಡೆದು ಮೌಖಿಕ ಕರಾರು ಪತ್ರ ಮಾಡಿ ಕೊಟ್ಟಿದ್ದೆವು ಎಂದರೆ ಸರಿಯಲ್ಲ. ನಿಡಿ 1 ಮತ್ತು ಮೌಖಿಕ ಕ್ರಯ ಕರಾರಿನನ್ವಯ 7 ಮತ್ತು 8 ನೇ ಪ್ರತಿವಾದಿಗಳಿಗೆ ನೋಂದಾಯಿತ ಕ್ರಯ ಪತ್ರಗಳನ್ನು ಬರೆದುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಅರ್ಧ ವಿಸ್ತೀರ್ಣದ ಆಸ್ತಿಯನ್ನು ನೀಡಿದ್ದು ಅದರಲ್ಲಿಯ ಅರ್ಧ ಜಾಗ ಉಳಿದಿದೆ. ನನಗಾಗಲಿ , ನನ್ನ ಇತರೆ ಕುಟುಂಬ ಸದಸ್ಯರಿಗಾಗಲಿ 7 ಮತ್ತು 8 ನೇ ಪ್ರತಿವಾದಿಗಳು ಕ್ರಯಕ್ಕೆ ಪಡೆದ ಆಸ್ತಿಯ ಮೇಲೆ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿ ಉತ್ತರಿಸಿರುವುದಿಲ್ಲ. 7 ಮತ್ತು 8 ನೇ ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಪ್ರಸ್ತುತ ಪ್ರಕರಣ ದಾಖಲಿಸಿದ್ದೇವೆ ಎಂದರೆ ಸಾಕ್ಷಿ ಉತ್ತರಿಸಿರುವುದಿಲ್ಲ.

( Ex.D.1 is marked on confrontation to DW.1 which is un registered agreement for sale having transferred possession of the property

referred in the document and executed on Rs.20/-. The Ex.D.1 is marked subject to payment of stamp duty and its proof in accordance with law)

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.